LAC. No.: 2/2023
PW-02

## **<u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂ-1 ನ್ಯಾಯಾಲಯ, ರಾಯಚೂರು.</u>**

ಭೂಸ್ವಾ ಪ್ರ. ಸಂಖ್ಯೆ : 2/2023

| | | |
|---|---|---|
| ಹೆಸರು | : | ಸುರೇಶ್ ವರ್ಮ |
| ತಂದೆ | : | ಮಲ್ಲಪ್ಪ |
| ವಯಸ್ಸು | : | *42* ವರ್ಷ |
| ಉದ್ಯೋಗ | : | ತಹಶೀಲ್ದಾರರು |
| ವಿಳಾಸ | : | ರಾಯಚೂರು |

## **<u>ದಿನಾಂಕಃ 17-01-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆಃ</u>** ವಿ.ಎಸ್.ಪಿ ವಕೀಲರಿಂದಃ

ನಾನು ನ್ಯಾಯಾಲಯದಿಂದ ಬಂದ ಸಮನ್ಸ್ ಗೆ ಉತ್ತರಿಸಲು ನಾನು ನನ್ನ ಅಧೀನಾಧಿಕಾರಿ ಅವರಿಂದ ವರದಿ ಪಡೆದಿರುತ್ತೇನೆ ಮತ್ತು ಸಾಕ್ಷ್ಯ ನೀಡಲು ಹಾಜರಾಗಿದ್ದೇನೆ.

ನನ್ನ ವರದಿಯನ್ನು ಸಲ್ಲಿಸುತಿದ್ದೇನೆ. ಸಾಕ್ಷಿಯ ವರದಿ ಮತ್ತು ಲಗತ್ತುಗಳನ್ನು ನಿಪಿ-22 ಎಂದು ಗುರುತಿಸಲಾಯಿತು. ಮಮದಾಪುರ ಗ್ರಾಮದ ಸರ್ವೆ ನಂ.221/ಆ ಟಿ.ಬಿ.ಪಿ ಕಾಲುವೆ ನೀರಾವರಿ ಸೌಲಭ್ಯ ಹೊಂದಿರುತ್ತದೆ, ಭತ್ತ ಮತ್ತು ಹತ್ತಿ ಒಟ್ಟು ವಾರ್ಷಿಕ ಎರಡು ಬೆಳೆ ಬೆಳೆಯುತ್ತಾರೆ.

**<u>ಪಾಟೀ ಸವಾಲುಃ</u>** ಡಿ.ಜಿ.ಪಿ. 1 ನೇ ಎದುರುದಾರರ ಪರಃ

ಮಮದಾಪುರ ಗ್ರಾಮದ ಸರ್ವೆ ನಂ.221/ಆ ಟಿ.ಬಿ.ಪಿ ಕಾಲುವೆ ನೀರಾವರಿ ಸೌಲಭ್ಯಯು ಸದರಿ ಸರ್ವೆ ನಂಬರ್ ನ ಜಮೀನಿನ ಕೊನೆಯ ಭಾಗದ ಸೌಲಭ್ಯ ಹೊಂದಿರುತ್ತದೆ ಎಂದರೆ ಸರಿ. ನೀರಿನ ಅಭಾವ ಉಂಟಾಗುವುದರಿಂದ ಸದರಿ ಜಮೀನಿನಲ್ಲಿ ಭತ್ತ ಅಥವಾ ಹತ್ತಿ ಒಂದೇ ಬೆಳೆಯನ್ನು ಬೆಳೆಯುತ್ತಾರೆ ಎಂದರೆ ಸರಿ, ಸಾಕ್ಷಿ ನೀರಿನ ಅಭಾವ ಉಟ್ಟಾಗದಿದ್ದರೆ ಎರಡು ಬೆಳೆಯನ್ನು ಬಳೆಯುತ್ತಾರೆ. ನನ್ನ ವರದಿಯು ಅಧೀನ ಅಧಿಕಾರಿಯವರ ವರದಿಯನ್ನಾಧರಿಸಿದೆ, ಯಾವುದೇ ದಾಖಲೆಗಳ ಆಧಾರವಲ್ಲ ಎಂದರೆ ಸರಿ. ಅರ್ಜಿದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯಹೇಳುತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** ಎಮ್.ಸಿ.ಸಿ.. 2 ನೇ ಎದುರುದಾರರ ಪರಃ

ಸುಳ್ಳು ವರದಿ ಸಲ್ಲಿಸಿ ಸುಳ್ಳು ಸಾಕ್ಷ್ಯಹೇಳುತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಗಣಕಯಂತ್ರದಲ್ಲಿ ಸಾಕ್ಷಿ ಮತ್ತು ಉಭಯತ್ರ ವಕೀಲರು ನೋಡಿ ಓದಿ, ತಿಳಿದುಕೊಂಡಿರುತ್ತಾರೆ)**

ಪ್ರ. ದ. ನ್ಯಾ.ದಂ - 1,
**ರಾಯಚೂರು.**